**ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ**
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ
ಕರ್ನಾಟಕ ಸರ್ಕಾರ

# ಅಕಾಡೆಮಿಯ ರಚನೆ ಹಾಗೂ ನಿಯಮ ಮತ್ತು ನಿಬಂಧನೆಗಳು

ವಿಜ್ಞಾನ ಭವನ, ನಂ.24/2, ಬಿ.ಡಿ.ಎ. ಕಾಂಪ್ಲೆಕ್ಸ್ ಹತ್ತಿರ
21ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ
ಬೆಂಗಳೂರು – 560 070
ದೂರವಾಣಿ/ಫ್ಯಾಕ್ಸ್ – 080–26711160
E-mail : ksta.gok@gmail.com
www.kstacademy.org

# ರಚನೆ


| | ಪುಟದ ಸಂಖ್ಯೆ |
|---|---|
| 1. ಸರ್ಕಾರಿ ಆದೇಶ ಸಂಖ್ಯೆ : ವಿಯಇ 70 ವಿತ್ರಮ 2004 ಬೆಂಗಳೂರು, ದಿನಾಂಕ : 30/08/2005 | 13 |
| 2. ಸರ್ಕಾರಿ ಆದೇಶ ಸಂಖ್ಯೆ : ವಿಯಇ 56 ವಿತ್ರಮ 2008 ಬೆಂಗಳೂರು, ದಿನಾಂಕ 04–11–2008. | 20 |
| 3. ಸರ್ಕಾರಿ ಆದೇಶ ಸಂಖ್ಯೆ: ವಿಯಇ 207 ವಿತ್ರಮ 2011, ಬೆಂಗಳೂರು, ದಿನಾಂಕ: 28/05/2012. | 51 |




## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ರಚನೆ ಬಗ್ಗೆ

**ಓದಲಾಗಿದೆ :**

1. ಮಾನ್ಯ ಯೋಜನಾ ರಾಜ್ಯ ಮಂತ್ರಿಗಳು, ಭಾರತ ಸರ್ಕಾರ ಇವರು ಮಾನ್ಯ ಮುಖ್ಯಮಂತ್ರಿಗಳಿಗೆ ಬರೆದ ಪತ್ರದ ಸಂಖ್ಯೆ : ಕೇಯೋಸ:2004–05:45, ದಿನಾಂಕ : 28/10/2004.
2. ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿಯವರ ಟಿಪ್ಪಣಿ ಸಂ:ಮುಮಂ/ಗೃಕ/890/2004 ದಿ:18/11/2004

**ಪ್ರಸ್ತಾವನೆ :**

ಭಾರತ ಸರ್ಕಾರದ ಮಾನ್ಯ ಯೋಜನಾ ರಾಜ್ಯ ಮಂತ್ರಿಗಳು ಮೇಲೆ ಒಂದರಲ್ಲಿ ಓದಲಾಗಿರುವ ತಮ್ಮ ಪತ್ರದಲ್ಲಿ ಸ್ಪರ್ಧಾ ಪ್ರಪಂಚದಲ್ಲಿ ವಿಜ್ಞಾನ ತಂತ್ರಜ್ಞಾನದ ಬೆಳವಣಿಗೆಯಾಗದಿದ್ದರೆ ಪ್ರಾದೇಶಿಕ ಭಾಷೆಗಳು ಕುಂಠಿತವಾಗುತ್ತದೆ ಅಲ್ಲದೆ ಕನ್ನಡಿಗರ ಜಾಗೃತಿ ಸಮಾವೇಶದಲ್ಲಿ, ಖ್ಯಾತ ವಿಮರ್ಶಕರಾದ ಶ್ರೀ ಎಲ್.ಎನ್.ಶೇಷಗಿರಿರಾವ್‌ರವರು ವಿಜ್ಞಾನ ಹಾಗೂ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಅಕಾಡೆಮಿಯನ್ನು ರಚಿಸಬೇಕೆಂದು ಸೂಚಿಸಿದ್ದಾರೆಂದೂ ಹಾಗೂ ಉತ್ತರ ಭಾರತದ ರಾಜ್ಯಗಳು ಈಗಾಗಲೇ ಇಂತಹ ತಂತ್ರಜ್ಞಾನ ಅಕಾಡೆಮಿಯನ್ನು ಸ್ಥಾಪಿಸಿವೆ ಎಂದು ತಿಳಿಸುತ್ತಾ, ಕರ್ನಾಟಕ ರಾಜ್ಯ ಜನತೆಗೆ ರಾಜ್ಯೋತ್ಸವದ ಕೊಡುಗೆಯಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯನ್ನು ರಚಿಸಲು ಅಂದಿನ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಚಿವರಾಗಿದ್ದ ಮಾನ್ಯ ಉಪ ಮುಖ್ಯ ಮಂತ್ರಿಗಳನ್ನು ಕೋರಿದ್ದರು.

ಮಾನ್ಯ ಮುಖ್ಯಮಂತ್ರಿಗಳು 2004ರ ನವೆಂಬರ್‌ನಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ ಸಂದರ್ಭದಲ್ಲಿ, ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯನ್ನು ರಚಿಸಲಾಗುವುದೆಂದು ಘೋಷಿಸಿದ್ದು, ಈ ಬಗ್ಗೆ ಕೂಡಲೆ ಅಗತ್ಯ ಕ್ರಮ ಕೈಗೊಳ್ಳಲು ಮೇಲೆ ಓದಲಾಗಿರುವ 2 ರಲ್ಲಿನ ಟಿಪ್ಪಣಿಯಲ್ಲಿ ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರು ಸೂಚಿಸಿದ್ದಾರೆ.

ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯನ್ನು ರಚಿಸುವ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ : ವಿಯಇ 70 ವಿತ್ರಮ 2004**
**ಬೆಂಗಳೂರು, ದಿನಾಂಕ : 30/07/2005**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯನ್ನು ಅನುಬಂಧದಲ್ಲಿ ವಿವರಿಸಿರುವಂತೆ ರಚಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದೆ.

1. ಸದರಿ ಅಕಾಡೆಮಿಯ ರಚನೆ, ಕರ್ತವ್ಯಗಳು ಮತ್ತು ಅಧಿಕಾರಗಳು ಅನುಬಂಧದಲ್ಲಿ ವಿವರಿಸಿರುವಂತೆ ಇರತಕ್ಕದ್ದು.
2. ಅನುಬಂಧದಲ್ಲಿ ವಿವರಿಸಿರುವಂತೆ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಅಧ್ಯಕ್ಷರನ್ನು ಮತ್ತು ಸದಸ್ಯರನ್ನು ನೇಮಕ ಮಾಡಲು ಸರ್ಕಾರವು ಅನುಮತಿ ನೀಡಿದೆ.
3. ಈ ಅಕಾಡೆಮಿಯು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಆಡಳಿತ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ.
4. ಈ ಅಕಾಡೆಮಿಗೆ ಅಗತ್ಯವಿರುವ ಹುದ್ದೆಗಳ ಸೃಜನೆ ಕುರಿತಂತೆ ಪ್ರತ್ಯೇಕವಾಗಿ ಆದೇಶ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಸಹಿ/–
**(ಎಸ್. ವಿ. ಸತ್ಯನಾರಾಯಣ ಮೂರ್ತಿ)**
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ಗೆ,

ಸಂಕಲಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಣೆಗಾಗಿ ಹಾಗೂ ಪ್ರಕಟಿಸಿದ 150 ಪ್ರತಿಗಳನ್ನು ಇಲಾಖೆಗೆ ಒದಗಿಸಲು ಕೋರಿ ಕಳುಹಿಸಿದೆ.



ಪ್ರತಿಗಳು :

1. ಮಹಾಲೇಖಪಾಲರು, ಲೆಕ್ಕಪತ್ರ ತನಿಖೆ 1 ಮತ್ತು 2 (ಎ ಮತ್ತು ಇ) ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು
3. ಮಾನ್ಯ ಉಪಮುಖ್ಯಮಂತ್ರಿಗಳ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
4. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಣ್ಣ ಉಳಿತಾಯ ಮಂತ್ರಿಯವರ ಆಪ್ತ ಕಾರ್ಯದರ್ಶಿ.
7. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಆರ್ಥಿಕ ಇಲಾಖೆ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಉನ್ನತ ಶಿಕ್ಷಣ ಇಲಾಖೆ ಮತ್ತು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ/ಯೋಜನಾ ಮತ್ತು ಸಾಂಖ್ಯಿಕ ಇಲಾಖೆ.
8. ನಿರ್ದೇಶಕರು, (ತಾಂತ್ರಿಕ), ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.
9. ನಿಯಂತ್ರಕರು, ರಾಜ್ಯ ಲೆಕ್ಕ ಪತ್ರ ಇಲಾಖೆ, ಕಾವೇರಿ ಭವನ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 7–8), ವಿಧಾನಸೌಧ, ಬೆಂಗಳೂರು
11. ರಕ್ಷಾ ಕಡತ / ಹೆಚ್ಚಿನ ಪ್ರತಿಗಳು.

**ಸರ್ಕಾರಿ ಆದೇಶ ಸಂಖ್ಯೆ : ವಿಯಇ 70 ವಿತ್ರಮ 2004, ದಿನಾಂಕ: 29/07/2005ರ**

## ಅನುಬಂಧ

### ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಅಂಗರಚನೆಯ ಸ್ವರೂಪ

(ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗಸಂಸ್ಥೆ)

1. ಅಕಾಡೆಮಿಯ ಹೆಸರು 'ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ' ಎಂಬುದಾಗಿ ಇರತಕ್ಕದ್ದು. (ಇದರಲ್ಲಿ ಇನ್ನು ಮುಂದೆ ಅಕಾಡೆಮಿ ಎಂದು ಉಲ್ಲೇಖಿವಾಗುತ್ತದೆ). ಇದು ಕರ್ನಾಟಕ ಸರ್ಕಾರದ ಸಂಸ್ಥೆಯಾಗಿರುತ್ತದೆ.
2. ಅಕಾಡೆಮಿಯ ಕೇಂದ್ರ ಕಛೇರಿಯು ಬೆಂಗಳೂರಿನಲ್ಲಿರತಕ್ಕದ್ದು.
3. ಅ) ಅಕಾಡೆಮಿಯು ಈ ಕೆಳಕಂಡ ಧ್ಯೇಯಗಳನ್ನು ಮತ್ತು ಉದ್ದೇಶಗಳನ್ನು ಹೊಂದಿರತಕ್ಕದ್ದು.

   i) ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಜನಪ್ರಿಯಗೊಳಿಸುವುದು. ವಿಜ್ಞಾನ ಕ್ಷೇತ್ರದಲ್ಲಿ ವಸ್ತು ಪ್ರದರ್ಶನಗಳು/ವಿಜ್ಞಾನ ಸಮ್ಮೇಳನಗಳನ್ನು ಪತ್ರಿಕೆಗಳನ್ನು ಮತ್ತು ಪುಸ್ತಕ ಪ್ರಕಟಣೆಗಳು, ಕಮ್ಮಟಗಳು, ಜಾಥಾಗಳನ್ನು ಏರ್ಪಡಿಸುವುದು, ವಿಜ್ಞಾನ ಪಾರ್ಕ್/ಕ್ಲಬ್‌ಗಳನ್ನು ರಾಜ್ಯಾದ್ಯಾಂತ ಸ್ಥಾಪಿಸಲು ಉತ್ತೇಜಿಸುವುದು.

   ii) ಬಡತನ ಮತ್ತು ನಿರುದ್ಯೋಗ ನಿರ್ಮೂಲನೆ ನಿಟ್ಟಿನಲ್ಲಿ ಹಾಗೂ ಜೀವನಮಟ್ಟ ಉತ್ತಮಗೊಳಿಸಲು ಪೂರಕವಾದ ವೈಜ್ಞಾನಿಕ ಮತ್ತು ತಾಂತ್ರಿಕ ಅವಿಷ್ಕಾರಗಳನ್ನು ಅಳವಡಿಸಿಕೊಳ್ಳಲು ಸರ್ಕಾರದ ಇಲಾಖೆಗಳೊಂದಿಗೆ ಸಮನ್ವಯ ಮಾಡುವುದು ವಿಶೇಷವಾಗಿ ಗ್ರಾಮಾಂತರ ಹಾಗೂ ಇತರೆ ಪ್ರದೇಶಗಳಲ್ಲಿ ಆರ್ಥಿಕ/ಕೈಗಾರಿಕಾ ಚಟುವಟಿಕೆಗಳ ಅಭಿವೃದ್ಧಿಗೆ ಪೂರಕವಾದ ಹೊಸ ಅವಿಷ್ಕಾರಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು.

   iii) ವೈಜ್ಞಾನಿಕ ಮತ್ತು ತಂತ್ರಜ್ಞಾನ ಅವಶ್ಯಕತೆಗಳನ್ನು, ವೈಜ್ಞಾನಿಕ ಮತ್ತು ತಂತ್ರಜ್ಞಾನ ನೀತಿ ರೂಪಿಸಲು ಸರ್ಕಾರಕ್ಕೆ ನೆರವು ನೀಡುವುದು ಹಾಗೂ ರಾಜ್ಯಕ್ಕೆ ಬೇಕಾಗುವ ವೈಜ್ಞಾನಿಕ ಮತ್ತು ತಂತ್ರಜ್ಞಾನ ಅವಶ್ಯಕತೆಗಳನ್ನು ಗುರುತಿಸಿ ಯೋಜನೆಗಳನ್ನು ರೂಪಿಸಲು ಸರ್ಕಾರಕ್ಕೆ ಸಲಹೆ ನೀಡುವುದು.

   iv) ವೈಜ್ಞಾನಿಕ ಸಂಶೋಧನಾ ಸಂಸ್ಥೆಗಳು, ಕೈಗಾರಿಕಾ ಕ್ಷೇತ್ರದ ಸಂಶೋಧನಾ ಸಂಸ್ಥೆಗಳು, ವಿವಿಧ ಕ್ಷೇತ್ರಗಳ ವಿಶ್ವವಿದ್ಯಾಲಯಗಳೊಂದಿಗೆ ವೈಜ್ಞಾನಿಕ ಮತ್ತು ತಂತ್ರಜ್ಞಾನ ಅವಿಷ್ಕಾರಗಳನ್ನು ಅಭಿವೃದ್ಧಿಪಡಿಸಲು ಸಮನ್ವಯಗೊಳಿಸುವುದು.

   v) ವಿಜ್ಞಾನಿಗಳನ್ನು ಉತ್ತೇಜಿಸಲು ಸಂಶೋಧನೆಗೆ ಹಣಕಾಸಿನ ನೆರವು (Fellowship) ನೀಡುವುದು. ಹಾಗೂ ಶಾಲಾ ಕಾಲೇಜುಗಳಲ್ಲಿ 'ವಿಜ್ಞಾನ ಸಂಘ' ಗಳನ್ನು



ಸ್ಥಾಪಿಸಲು ಉತ್ತೇಜಿಸುವುದು ಮತ್ತು ಅವುಗಳಿಗೆ ಅನುದಾನ ನೀಡುವುದು.

   vi) ವೈಜ್ಞಾನಿಕ ಕ್ಷೇತ್ರದಲ್ಲಿ ಮಹತ್ ಸಾಧನೆಗಳನ್ನು ಸಾಧಿಸಿದ ವಿಜ್ಞಾನಿಗಳಿಗೆ ಪ್ರಶಸ್ತಿಗಳನ್ನು ಪ್ರಧಾನ ಮಾಡುವುದು.

   vii) ತನ್ನ ಉದ್ದೇಶಗಳ ಮುನ್ನಡೆಗಾಗಿ ಅಗತ್ಯವಿರಬಹುದಾದ, ಮೇಲೆ ತಿಳಿಸಿದಂತಹ ಧ್ಯೇಯೋದ್ದೇಶಗಳಿಗೆ ಪ್ರಾಸಂಗಿಕವಾದ ಅಥವಾ ಪ್ರಾಸಂಗಿಕವಲ್ಲದ ಇತರ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವುದು.

1. **ಅಕಾಡೆಮಿ** : ಅಕಾಡೆಮಿಯು ಈ ಕೆಳಕಂಡಂತೆ 21 ಸದಸ್ಯರನ್ನು ಹೊಂದಿರತಕ್ಕದ್ದು.

| | |
|---|---|
| ಅ) ಅಧ್ಯಕ್ಷರು | – 1 |
| ಆ) ಸರ್ಕಾರದ ಪದನಿಮಿತ್ತ ಸದಸ್ಯರು | – 5 |
| ಅಂದರೆ | |
| 1) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ | |
| 2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ ಆರ್ಥಿಕ ಇಲಾಖೆ | |
| 3) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆ | |
| 4) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ ಅರಣ್ಯ ಮತ್ತು ಜೀವಿಶಾಸ್ತ್ರ ಪರಿಸರ ಇಲಾಖೆ | |
| 5) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ | |
| ಇ) ಸರ್ಕಾರವು ಸೂಚಿಸಿದ ವೈಜ್ಞಾನಿಕ ಸಂಶೋಧನ ಸಂಸ್ಥೆಗಳು / ಕೈಗಾರಿಕೆಗಳು/ಕಂಪನಿಗಳು/ಇತರೆ ಸಂಸ್ಥೆಗಳನ್ನು ಪ್ರತಿನಿಧಿಸುವ ಸದಸ್ಯರು | – 04 |
| ಈ) ರಾಜ್ಯ ಸರ್ಕಾರದಿಂದ ನಾಮನಿರ್ದೇಶನ ಮಾಡಲ್ಪಟ್ಟ ಸದಸ್ಯರು | – 10 |
| ಉ) ಸದಸ್ಯ ಕಾರ್ಯದರ್ಶಿ | – 01 |
| ಒಟ್ಟು | – 21 |

(i) ಸರ್ಕಾರದಿಂದ ನಾಮನಿರ್ದೇಶನಗೊಳ್ಳುವ ಸದಸ್ಯರು ವಿಜ್ಞಾನ ಮತ್ತು ತಂತ್ರಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ನಿಪುಣತೆ ಹೊಂದಿದವರಾಗಿರಬೇಕು.

(ii) ನಾಮ ನಿರ್ದೇಶಿತವಾದ ಸದಸ್ಯರು ನಾಮಕರಣವಾದ ನಂತರ ಮೂರು ವರ್ಷಗಳ ಅವಧಿಯವರೆಗೆ ಪದಧಾರಣೆ ಮಾಡತಕ್ಕದ್ದು.

(iii) ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾದ ಸದಸ್ಯರು ರಾಜೀನಾಮೆ ನೀಡಿದ ಅಥವಾ ಮರಣ ಹೊಂದಿದ ಅಥವಾ ಕಾನೂನಿನ ಕಾರಣದಿಂದ ಮುಂದುವರೆಯಲು ಅಸಮರ್ಥರಾದ ಕಾರಣದಿಂದ ಖಾಲಿಯಾದ ಯಾವುದೇ ಸ್ಥಾನವನ್ನು ತುಂಬಲು ರಾಜ್ಯ ಸರ್ಕಾರವು ವ್ಯಕ್ತಿಗಳನ್ನು ನಾಮನಿರ್ದೇಶಿಸಬಹುದು. ಹಾಗೆ ನಾಮನಿರ್ದೇಶಿತನಾದ ವ್ಯಕ್ತಿಯು, ಯಾವ ವ್ಯಕ್ತಿಯ ಸ್ಥಾನದಲ್ಲಿ ನಾಮನಿರ್ದೇಶಿತನಾಗಿರುವನೋ ಅಂತಹ ವ್ಯಕ್ತಿಯ ಸ್ಥಾನವು ಖಾಲಿಯಾಗಿರದಿದ್ದರೆ ಆ ವ್ಯಕ್ತಿಯು ಯಾವ ಅವಧಿಯವರೆಗೆ ಪದಧಾರಣೆ ಮಾಡುತ್ತಿದ್ದನೋ ಅಂತಹ ಅವಧಿಯವರೆಗೆ ಪದಧಾರಣೆ ಮಾಡತಕ್ಕದ್ದು.

(4) ಅಕಾಡೆಮಿಯು ಅಗತ್ಯವೆಂದು ಪರಿಗಣಿಸಿದ್ದಲ್ಲಿ ಒಂದು ನಿಶ್ಚಿತ ಉದ್ದೇಶಕ್ಕಾಗಿ ಅದು ಮನಗಂಡ ತಜ್ಞರನ್ನು ಸಭೆಗೆ ಆಹ್ವಾನಿಸಬಹುದು.

(5) **ಅಧ್ಯಕ್ಷರು** : (i) ರಾಜ್ಯ ಸರ್ಕಾರವು ಅಧ್ಯಕ್ಷರನ್ನು ನಾಮನಿರ್ದೇಶಿಸುತ್ತದೆ ಮತ್ತು ಅವರು ಮೂರು ವರ್ಷಗಳ ಅವಧಿಯವರೆಗೆ ಪದಧಾರಣೆ ಮಾಡತಕ್ಕದ್ದು.

(ii) ಅಧ್ಯಕ್ಷರು ಯಾವುದೇ ಸಂಸ್ಥೆಯಲ್ಲಿ ಪೂರ್ಣಾವಧಿಗೆ ವೇತನ / ಸಂಭಾವನೆ ಪಡೆಯುವ ಉದ್ಯೋಗಿಯಾಗಿರಬಾರದು.

(iii) ಅಧ್ಯಕ್ಷರು ಅಕಾಡೆಮಿಯ ಮುಖ್ಯಾಧಿಕಾರಿಯಾಗಿರತಕ್ಕದ್ದು. ಅವರು ಇತರೆ ಯಾವುದೇ ಸಮಿತಿಯನ್ನು ನಿಯಮಗಳ ಮೇರೆಗೆ ರಚಿಸಿದ್ದಲ್ಲಿ ಅಂತಹ ಸಮಿತಿಗಳ ಸಭೆಗಳ ಅಧ್ಯಕ್ಷತೆ ವಹಿಸುವುದು.

(iv) ಅಧ್ಯಕ್ಷರು ಗೌರವ ಸಂಭಾವನೆಯಾಗಿ ಮಾಹೆಯಾನ ರೂಪಾಯಿ 5000-00 (ಐದು ಸಾವಿರ ರೂಪಾಯಿ) ಗಳನ್ನು ಪಡೆಯಬಹುದು.

(v) ಅಧ್ಯಕ್ಷರ ನಿವಾಸದ ದೂರವಾಣಿ ಶುಲ್ಕವನ್ನು 2 ತಿಂಗಳಿಗೊಮ್ಮೆ ರೂ.3000 ಮೀರದಂತೆ ಅಕಾಡೆಮಿ ಭರಿಸತಕ್ಕದ್ದು.

(vi) ಅಧ್ಯಕ್ಷರು ಅಕಾಡೆಮಿಯ ನಿರ್ಧಾರಗಳನ್ನು ಅನುಷ್ಠಾನಗೊಳಿಸಲು ಬೇಕಾಗುವ ಹಣ ನೀಡಲು ಕಾರ್ಯದರ್ಶಿಗಳೊಡನೆ ಜಂಟಿಯಾಗಿ ಚೆಕ್‌ಗೆ ಸಹಿ ಮಾಡುವುದು.



(6) **ಕಾರ್ಯದರ್ಶಿ** (1) ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ನಿರ್ದೇಶಕರು ಈ ಅಕಾಡೆಮಿಯ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ ಹಾಗೂ ಇವರು ಈ ಅಕಾಡೆಮಿಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯಾಗಿರುತ್ತಾರೆ ಅವರು ಅಕಾಡೆಮಿಯು (2) ಸ್ಥಾಪಿಸಬಹುದಾದ ಇತರ ಸಮಿತಿಗಳ ಪದನಿಮಿತ್ತ ಸದಸ್ಯ ಕಾರ್ಯದರ್ಶಿಯಾಗಿ ಸಹ ಕಾರ್ಯನಿರ್ವಹಿಸತಕ್ಕದ್ದು.

(7) **ಕಾರ್ಯದರ್ಶಿಯವರ ಕರ್ತವ್ಯಗಳು ಕೆಳಕಂಡಂತಿರತಕ್ಕದ್ದು**

(i) ಅಕಾಡೆಮಿಯ ಆಡಳಿತ ನಿಯಂತ್ರಣ ಕಾರ್ಯನಿರ್ವಹಿಸುವುದು.

(ii) ಅಕಾಡೆಮಿಯ ದಾಖಲೆಗಳನ್ನು ಮತ್ತು ಅಂತಹ ಇತರ ಸ್ವತ್ತುಗಳನ್ನು ಸಂರಕ್ಷಿಸುವುದು

(iii) ಅಕಾಡೆಮಿಯ ಪರವಾಗಿ ಅಧಿಕೃತ ಪತ್ರ ವ್ಯವಹಾರ ನಡೆಸುವುದು.

(iv) ಅಕಾಡೆಮಿಯ ಮತ್ತು ಅಕಾಡೆಮಿಯಿಂದ ನೇಮಕಗೊಂಡ ಎಲ್ಲಾ ಸಮಿತಿಗಳ ಸಭೆ ನಡೆಸುವ ಬಗ್ಗೆ ಎಲ್ಲಾ ನೋಟಿಸುಗಳನ್ನು ನೀಡುವುದು, ಅಂದರೆ ಸದರಿ ಸಮಿತಿಗಳ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುವುದು.

(v) ಅಕಾಡೆಮಿಯ ಮತ್ತು ಅಕಾಡೆಮಿಯಿಂದ ನೇಮಕಗೊಂಡ ಎಲ್ಲಾ ಸಮಿತಿಗಳ ಎಲ್ಲಾ ಸಭೆಗಳ ನಡವಳಿಕೆಗಳನ್ನು ಇಟ್ಟುಕೊಂಡು ಬರುವುದು.

(vi) ಅಕಾಡೆಮಿಯಿಂದ ಉಪ ಸಮಿತಿಯಿಂದ/ಗಳಿಂದ ಅನುಮೋದಿತವಾದ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಮತ್ತು ನಡೆಸುವುದು.

(vii) ಅಕಾಡೆಮಿಯ ಪರವಾಗಿ ಕರಾರುಗಳಿಗೆ ರುಜು ಹಾಕುವುದು.

(viii) ಅಕಾಡೆಮಿಯ ಅಥವಾ ಅಕಾಡೆಮಿಯಿಂದ ನೇಮಕಗೊಂಡ ಉಪ ಸಮಿತಿಗಳ ನಿರ್ಣಯಗಳ ಪ್ರಕಾರ ಅನ್ವಯವಾಗುವ ನಿಯಮಗಳ ಅಡಿಯಲ್ಲಿ ವೆಚ್ಚವನ್ನು ಭರಿಸತಕ್ಕದ್ದು.

(ix) ಅಕಾಡೆಮಿ ಪರವಾಗಿ ಸಾರ್ವಜನಿಕ ವಂತಿಕೆ ದೇಣಿಗೆ ಇತರೆ ನಿಧಿಗಳನ್ನು ಸ್ವೀಕರಿಸುವುದು.

(x) ಅಕಾಡೆಮಿಯ ಸ್ವತ್ತು ಮತ್ತು ವಿನಿಯೋಗಗಳ ವ್ಯವಸ್ಥೆ ನೋಡಿಕೊಳ್ಳತಕ್ಕದ್ದು ಮತ್ತು ವಾರ್ಷಿಕ ಅಂದಾಜುಗಳನ್ನು ಲೆಕ್ಕಪತ್ರಗಳ ವಿವರಣೆಗಳನ್ನು ತಯಾರಿಸುವ ಮತ್ತು ಅಕಾಡೆಮಿಗಳಿಗೆ ಅವುಗಳನ್ನು ಒಪ್ಪಿಸಲು ಜವಾಬ್ದಾರಿ ಹೊಂದಿರತಕ್ಕದ್ದು.

(xi) ಅಕಾಡೆಮಿಯ ಲೆಕ್ಕ ಪತ್ರಗಳನ್ನು ಇಟ್ಟುಕೊಂಡು ಬರತಕ್ಕದ್ದು.

(xii) ಅಕಾಡೆಮಿಯಿಂದ/ಉಪ ಸಮಿತಿಗಳಿಂದ ದತ್ತವಾದ ಅಧಿಕಾರದ ಮೂಲಕ ಸರ್ಕಾರದಿಂದ ಮಂಜೂರಾದ ಅನುವಾದಗಳೂ ಸೇರಿದಂತೆ ಅಕಾಡೆಮಿಯ ನಿಧಿಗಳಲ್ಲಿ ಪರಿಮಿತಿಗಳೊಡನೆ ಅಕಾಡೆಮಿಯ ಉದ್ದೇಶ, ಗುರಿ ಮತ್ತು ಧ್ಯೇಯಗಳಿಗಾಗಿ ಅಕಾಡೆಮಿಯ ಅನುಮೋದನೆಯೊಂದಿಗೆ ನಿಯಮಾನುಸಾರ ಮಂಜೂರಾತಿಯ ಎಲ್ಲಾ ಆಡಳಿತಾತ್ಮಕ ಮತ್ತು ಆರ್ಥಿಕ ಅಧಿಕಾರವನ್ನು ಚಲಾಯಿಸತಕ್ಕದ್ದು.

(xiii) ಅಕಾಡೆಮಿಯ ಕಾರ್ಯ ಚಟುವಟಿಕೆ ಹಾಗೂ ಲೆಕ್ಕ ಪತ್ರಗಳ ತ್ರೈಮಾಸಿಕ ವರದಿಯನ್ನು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ತಪ್ಪದೆ ಕಳುಹಿಸತಕ್ಕದ್ದು.

**(8) ಅಕಾಡೆಮಿಯ ಕರ್ತವ್ಯಗಳು ಮತ್ತು ಅಧಿಕಾರಗಳು :**

(i) ನಿರ್ದಿಷ್ಟ ಉದ್ದೇಶಗಳಿಗಾಗಿ ಮತ್ತು ನಿರ್ದಿಷ್ಟ ಅವಧಿಗಾಗಿ ತನ್ನ ಸದಸ್ಯರ ಪೈಕಿಯಿಂದ ಆಯ್ಕೆ ಮಾಡಿದ ಪ್ರತಿಯೊಂದು ಉಪಸಮಿತಿಯಲ್ಲಿ 5 ಕ್ಕಿಂತ ಹೆಚ್ಚ ಸದಸ್ಯರಿರದಂತೆ ಉಪಸಮಿತಿಗಳನ್ನು ರಚಿಸುವುದು. ಈ ಸಮಿತಿಗಳು ತಮ್ಮ ವರದಿಗಳನ್ನು / ಶಿಫಾರಸ್ಸುಗಳನ್ನು ಅಕಾಡೆಮಿಗೆ ಒಪ್ಪಿಸತಕ್ಕದ್ದು.

(ii) ವಾರ್ಷಿಕ ಬಜೆಟ್‌ನ್ನು ಅನುಮೋದಿಸುವುದು. ಯೋಜನೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಮತ್ತು ನಿಗದಿಪಡಿಸಿರುವ ಬಜೆಟಿನ ಮಿತಿಯೊಳಗೆ ವೆಚ್ಚವನ್ನು ನಿರ್ವಹಿಸಲು ಅಕಾಡೆಮಿಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಯವರಿಗೆ ಅಧಿಕಾರ ಪ್ರತ್ಯಾಯೋಜಿಸುವ ಅವಕಾಶವಿರುವುದು.

(iii) ಲೆಕ್ಕ ಪರಿಶೋಧಕರ ನಾಮನಿರ್ದೇಶನ ಮಾಡುವುದು.

(iv) ಪ್ರತಿ ಮಾಹೆಯ ಜಮಾ–ಖರ್ಚಿನ ಮಾಹಿತಿಯನ್ನು ಪರಿಶೀಲಿಸಿ ಅನುಮೋದಿಸುವುದು.

(v) ತಾನು ಅವಶ್ಯಕವೆಂದು ಭಾವಿಸುವಷ್ಟು ಹುದ್ದೆಗಳನ್ನು ಸೃಜಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು ಮತ್ತು ಸರ್ಕಾರದಲ್ಲಿನ ಸಂವಾದಿ ಹುದ್ದೆಗಳಿಗೆ ಅನ್ವಯವಾಗುವ ನಿಯಮಗಳಿಗೆ ಅನುಸಾರವಾಗಿ ಕಾರ್ಯದರ್ಶಿಯ ಹುದ್ದೆಯನ್ನು ಹೊರತು ಪಡಿಸಿ ಇತರೆ ಎಲ್ಲಾ ದರ್ಜೆಯ ಹುದ್ದೆಗಳನ್ನು ರಾಜ್ಯ ಸರ್ಕಾರಿ/ಕೇಂದ್ರ ಸರ್ಕಾರಿ/ಇತರೆ ಸರ್ಕಾರಿ ಸ್ವಾಮ್ಯದ ಸೇವೆಗಳಿಂದ ಪ್ರತಿನಿಯೋಜನೆಯ ಮೇಲೆ ತೆಗೆದುಕೊಳ್ಳುವ ಮೂಲಕ ತುಂಬಿಕೊಳ್ಳತಕ್ಕದ್ದು.

(vi) ಅಕಾಡೆಮಿಯು, ಆರ್ಥಿಕ ವರ್ಷದಲ್ಲಿ ತನ್ನ ಸಭೆಯನ್ನು ನಿಗದಿಪಡಿಸಿದ ಸ್ಥಳದಲ್ಲಿ ಮತ್ತು ದಿನಾಂಕದಂದು ಎರಡು ತಿಂಗಳಿಗೊಂದು ಸಲ ಸಭೆ ಸೇರತಕ್ಕದ್ದು.



ಅಧ್ಯಕ್ಷರು ತಾವಾಗಿಯೇ ಅಥವಾ ಅಕಾಡೆಮಿಯ 1/3 ರಷ್ಟು ಸದಸ್ಯರಿಗಿಂತ ಕಡಿಮೆಯಲ್ಲದಷ್ಟು ಸದಸ್ಯರ ಕೋರಿಕೆಯ ಮೇರೆಗೆ ಯಾವುದೇ ಇತರ ಸಮಯದಲ್ಲಿ ವಿಶೇಷ ಸಭೆಯನ್ನು ಕರೆಯಬಹುದು.

**(9) ಸಭೆಗಳು :**

(i) ಸಭೆಯನ್ನು ನಡೆಸಲು ಕನಿಷ್ಠ ಪಕ್ಷ 1/3ರಷ್ಟು ಕೋರಂ ಇರಬೇಕು. ಕೋರಂ ಇಲ್ಲದಿದ್ದಲ್ಲಿ 1/2 ಗಂಟೆ ಕಾಯ್ದು ಮುಂದಿನ ದಿನಾಂಕಕ್ಕೆ ಮುಂದೂಡಬಹುದಾಗಿದೆ. ಮುಂದೂಡಿದ ಸಭೆಗೆ ಯಾವುದೇ ಕೋರಂ ಅವಶ್ಯಕತೆ ಇಲ್ಲ.

(ii) ಅಧ್ಯಕ್ಷರು ಸಭೆಗೆ ಆಕಸ್ಮಿಕ ಹಾಜರಾಗದಿದ್ದಲ್ಲಿ 1/2 ಗಂಟೆ ಕಾಯ್ದು ನಂತರ ಕೋರಂ ಇದ್ದಲ್ಲಿ ಹಾಜರಿದ್ದ ಸದಸ್ಯರ ಪೈಕಿ ಒಬ್ಬರನ್ನು ಅಧ್ಯಕ್ಷ ಸ್ಥಾನಕ್ಕೆ ಕೈ ಎತ್ತುವ ಮೂಲಕ ಚುನಾಯಿಸಿ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಸುವುದು.

**(10) ಅಕಾಡೆಮಿಯ ನಿಧಿಗಳು :**

(i) ಅಕಾಡೆಮಿಯ ನಿಧಿಗಳು ಕೆಳಕಂಡವುಗಳನ್ನು ಒಳಗೊಂಡಿರತಕ್ಕದ್ದು.

ಅ). ಅಕಾಡೆಮಿಯ ಉದ್ದೇಶಗಳ ಅನುಷ್ಠಾನ ಮತ್ತು ವಿಸ್ತರಣೆಗಾಗಿ ಕರ್ನಾಟಕ ಸರ್ಕಾರ, ಭಾರತ ಸರ್ಕಾರ, ಇವುಗಳಿಂದ ಬಂದ ಅನುದಾನಗಳು, ಕೊಡುಗೆಗಳು, ವಂತಿಕೆಗಳು, ದಾನಗಳು, ಮುಂಗಡಗಳು ಮತ್ತು ಸಾಲಗಳು.

ಆ). ಖಾಸಗಿ ಸಂಘ ಸಂಸ್ಥೆ, ಸಾರ್ವಜನಿಕರಿಂದ, ವ್ಯಕ್ತಿಗಳಿಂದ ಸ್ವೀಕರಿಸಿದ ಕೊಡುಗೆಗಳು, ವಂತಿಕೆಗಳು ಮತ್ತು ದಾನಗಳು.

ಇ). ಅಕಾಡೆಮಿಯ ಪ್ರಕಟಣೆಗಳ ಮಾರಾಟ ಮತ್ತು ಅದರಿಂದ ಏರ್ಪಡಿಸಲಾದ ಕಾರ್ಯಕ್ರಮಗಳಿಂದ ಬಂದ ಜಮೆಗಳು ಮತ್ತಿತರೆ ಉತ್ಪನ್ನಗಳಿಂದ ಬಂದ ಎಲ್ಲಾ ಇತರ ಹಣ.

(ii) ಅಕಾಡೆಮಿಯಿಂದ ಅಥವಾ ಅಕಾಡೆಮಿಯ ಪರವಾಗಿ ಸ್ವೀಕರಿಸಲಾದ ಎಲ್ಲಾ ಹಣವನ್ನು ಬೆಂಗಳೂರಿನಲ್ಲಿರುವ ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ ಅಕಾಡೆಮಿಯ ಹೆಸರಿನಲ್ಲಿ ಇಡತಕ್ಕದ್ದು ಮತ್ತು ಅಕಾಡೆಮಿ ಅಥವಾ ಉಪ ಸಮಿತಿಯಿಂದ ಅಥವಾ ಅಧ್ಯಕ್ಷರಿಂದ ಅನುಮೋದಿತವಾದ ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಅಧ್ಯಕ್ಷರಿಂದ ಮತ್ತು ಕಾರ್ಯದರ್ಶಿಯವರಿಂದ ರುಜು ಹಾಕಿದ ಚೆಕ್‌ನ ಹೊರತಾದ ಹಣವನ್ನು ಹಿಂತೆಗೆದುಕೊಳ್ಳತಕ್ಕದಲ್ಲ. ಹಾಗಿದ್ದರೂ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳ ಪೈಕಿ ಯಾರಾದರೊಬ್ಬರು ಜರೂರು ಸಂದರ್ಭದಲ್ಲಿ 10,000/– ರೂ.ಗೆ ಮೀರದಷ್ಟು ಹಣವನ್ನು ಚೆಕ್‌ನ ಮೂಲಕ ಪಡೆಯಬಹುದು. ಆದರೆ ಹಾಗೆ ಮಾಡಿದ ವೆಚ್ಚದ ಬಗ್ಗೆ ಅನುಮೋದನೆಯನ್ನು ಆ ತರುವಾಯ ಕೂಡಲೆ ಅಕಾಡೆಮಿಯಿಂದ ಪಡೆಯತಕ್ಕದ್ದು, ಪಡೆದ ಎಲ್ಲಾ ಹಣದ ಬಗ್ಗೆ ನಗದು ಪುಸ್ತಕದಲ್ಲಿ ನಮೂದಿಸತಕ್ಕದ್ದು ಮತ್ತು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

(iii) ಅಕಾಡೆಮಿಯ ಹೆಸರಿನಲ್ಲಿರುವ ಎಲ್ಲಾ ಹಣವನ್ನು ಅಕಾಡೆಮಿಗೆ ಅನ್ವಯಿಸತಕ್ಕ ನಿಯಮಗಳ ಪ್ರಕಾರ ಮತ್ತು ಸಂದರ್ಭಾನುಸಾರ ಅಕಾಡೆಮಿಯ ಅಥವಾ ಉಪ ಸಮಿತಿಯ ನಿರ್ಣಯಗಳ ಪ್ರಕಾರ ಅಕಾಡೆಮಿಯ ತನ್ನ ಉದ್ದೇಶಿತ ಉದ್ದೇಶಗಳಿಗಾಗಿ ವೆಚ್ಚ ಮಾಡತಕ್ಕದ್ದು.

(iv) ಅಕಾಡೆಮಿಯ ಅಧಿಕಾರೇತರ ಸದಸ್ಯರೆಲ್ಲರೂ ಕರ್ನಾಟಕ ಸರ್ಕಾರಿ ಸೇವಾ ನಿಯಾಮವಳಿಯ 'ಎ' ಅನುಬಂಧದಲ್ಲಿರುವ ಗ್ರಾಹ್ಯ ಪ್ರಮಾಣ ಭತ್ಯೆ ಮತ್ತು ತುಟ್ಟಿಭತ್ಯೆ ಪಡೆಯಲು ಅರ್ಹರಿರುತ್ತಾರೆ. ಅವರು ಅಕಾಡೆಮಿಯ ಮತ್ತು ಯಾವುದೇ ಸಮಿತಿಗಳ ಸಭೆಗಳಿಗೆ ಹಾಜರಾದಲ್ಲಿ ಪ್ರತಿದಿನಕ್ಕೆ ಮೇಲೆ ಹೇಳಿದ ಅನುಬಂಧ 'ಎ' ಯನುಸಾರ ಸಭಾಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ. ಅಕಾಡೆಮಿಯ ಅಧ್ಯಕ್ಷರು, ಸದಸ್ಯ ಕಾರ್ಯದರ್ಶಿಗಳು ಹಾಗೂ ಸರ್ಕಾರದ ಪದನಿಮಿತ್ತ ಸದಸ್ಯರು ಸಭಾಭತ್ಯೆ ಪಡೆಯಲು ಅರ್ಹರಿರುವುದಿಲ್ಲ.

(v) ಅಕಾಡೆಮಿಯ ಲೆಕ್ಕಪತ್ರಗಳನ್ನು ರಾಜ್ಯ ಲೆಕ್ಕಪತ್ರ ಇಲಾಖೆ/ಅಕೌಂಟೆಂಟ್ ಜನರಲ್‌ರವರು ಪ್ರತಿವರ್ಷ ಪರಿಶೋಧಿಸತಕ್ಕದ್ದು, ಲೆಕ್ಕ ತಪಾಸಣೆ ವರದಿಯನ್ನು ಅಕಾಡೆಮಿಯ ಸಾಮಾನ್ಯ ಸಭೆಗೆ ಮಂಡಿಸುವುದು.

(11) ಸರ್ಕಾರಿ ನೌಕರರಿಗೆ ಮತ್ತು ಕಛೇರಿಗಳಿಗೆ ಅನ್ವಯಿಸತಕ್ಕ ಕರ್ನಾಟಕ ನಾಗರೀಕ ಸೇವಾ ನಿಯಾಮವಳಿಗಳೂ, ಕರ್ನಾಟಕ ಆರ್ಥಿಕ ಸಂಹಿತೆಯ ಕರ್ನಾಟಕ ಖಜಾನೆ ಸಂಹಿತೆಯ ಮತ್ತು ಇತರ ನಿಯಮಗಳ ಉಪಬಂಧಗಳು ಅಕಾಡೆಮಿಯ ನೇಮಕಾತಿಗಳಿಗೆ, ಸೇವೆಗಳಿಗೆ ಮತ್ತು ಕಾರ್ಯಕಲಾಪಗಳಿಗೂ ಅನ್ವಯವಾಗತಕ್ಕದ್ದು. ಆದರೂ ಅಕಾಡೆಮಿಯು ಅವಶ್ಯವಿರುವಲ್ಲೆಲ್ಲಾ ಮತ್ತು ಈ ವಿಷಯದ ಬಗ್ಗೆ ಇರುವ ಸರ್ಕಾರಿ ನಿಯಮಗಳೊಂದಿಗೆ ಸುಸಂಗತವಾಗಿರುವ ವಿಶೇಷ ನಿಯಮಗಳನ್ನು ಹಾಗೂ ಬೈಲಾಸ್ ರಚಿಸಿಕೊಳ್ಳಬಹುದಾಗಿದೆ ಮತ್ತು ಅವುಗಳನ್ನು ತಿದ್ದುಪಡಿ ಮಾಡಿಕೊಳ್ಳಬಹುದು.

(12) ಅಕಾಡೆಮಿಯು ಗೊತ್ತುಪಡಿಸಬಹುದಾದ ಇತರೆ ವರದಿಗಳನ್ನಲ್ಲದೆ ಅಕಾಡೆಮಿಯ ಕಾರ್ಯಚಟುವಟಿಕೆಗಳು ಹಾಗೂ ವೆಚ್ಚ ವಿವರಗಳ ಬಗ್ಗೆ ಸರ್ಕಾರಕ್ಕೆ ವಾರ್ಷಿಕ ವರದಿಯನ್ನು ಸಲ್ಲಿಸತಕ್ಕದ್ದು, ರಾಜ್ಯ ಸರ್ಕಾರವು, ತನ್ನ ಕಾರ್ಯನೀತಿ, ಹಣಕಾಸು ಮತ್ತು ಸಾರ್ವಜನಿಕ ಮಹತ್ವವುಳ್ಳ ವಿಷಯಗಳ ಮೇಲೆ ತಾನು ಅವಶ್ಯವೆಂದು ಭಾವಿಸುವಂತಹ ಸೂಚನೆಗಳನ್ನು ಅಕಾಡೆಮಿಗಳಿಗೆ ನೀಡಬಹುದು. ಅಕಾಡೆಮಿಯು ಅಂತಹ ಸೂಚನೆಗಳನ್ನು ಪಾಲಿಸತಕ್ಕದ್ದು ಮತ್ತು ಸರ್ಕಾರ ಅವಶ್ಯವೆಂದು ಭಾವಿಸುವಂತಹ ವರದಿಗಳನ್ನು ಮತ್ತು ಇತರೆ ಮಾಹಿತಿಗಳನ್ನು ಒದಗಿಸತಕ್ಕದ್ದು.

ಸಹಿ/-
(ಎಸ್.ವಿ. ಸತ್ಯನಾರಾಯಣ ಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.



## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಗೆ ಅಧ್ಯಕ್ಷರನ್ನು ಮತ್ತು ಸದಸ್ಯರನ್ನು ನೇಮಿಸುವ ಕುರಿತು.

**ಓದಲಾಗಿದೆ :** ಸರ್ಕಾರಿ ಆದೇಶ ಸಂಖ್ಯೆ ವಿಯಇ 70 ವಿತ್ರಮ 2004, ದಿ: 30/07/2005.

**ಪ್ರಸ್ತಾವನೆ:**

ಮೇಲೆ ಓದಲಾದ ಸರ್ಕಾರಿ ಆದೇಶದಲ್ಲಿ ಕರ್ನಾಟಕ ರಾಜ್ಯದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯೊಂದನ್ನು ರಚಿಸಿ ಆದೇಶ ಹೊರಡಿಸಲಾಗಿದೆ. ಸದರಿ ಆದೇಶದಲ್ಲಿ ಅಕಾಡೆಮಿಯ ಅಂಗರಚನೆ, ಅಧ್ಯಕ್ಷರು/ಸದಸ್ಯರ ನಾಮನಿರ್ದೇಶನ/ನೇಮಕಾತಿಗಳ ಬಗ್ಗೆ ವಿವರಿಸಲಾಗಿದೆ. ಈಗ ಸದರಿ ಅಂಗರಚನೆಯ ಪ್ರಕಾರ ಈ ಅಕಾಡೆಮಿಗೆ ಅಧ್ಯಕ್ಷರು/ಸದಸ್ಯರುಗಳನ್ನು ಸರ್ಕಾರವು ನಾಮನಿರ್ದೇಶನ ಮಾಡಬೇಕಾಗಿದ್ದು ಈ ಬಗ್ಗೆ ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ ವಿಯಇ 70 ವಿತ್ರಮ 2004 ಬೆಂಗಳೂರು,**
**ದಿನಾಂಕ: 03/08/2005.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನಮೂದಿಸಿದವರನ್ನು ಕರ್ನಾಟಕ ರಾಜ್ಯದ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಗೆ ಅವರ ಹೆಸರಿನ ಮುಂದೆ ತೋರಿಸಿದಂತೆ ಅಧ್ಯಕ್ಷರು/ಸದಸ್ಯರನ್ನಾಗಿ ಈ ತಕ್ಷಣದಿಂದ ಜಾರಿಗೆ ಬರುವಂತೆ ನಾಮನಿರ್ದೇಶಿಸಿ ಮುಂದಿನ 3 ವರ್ಷಗಳ ಅವಧಿಗಾಗಿ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ನೇಮಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಸಹಿ/-
(ಬಿ. ಶಿವರುದ್ರಸ್ವಾಮಿ)
ಪೀಠಾಧಿಕಾರಿ,
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

**ಇವರಿಗೆ**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಣೆಗಾಗಿ ಹಾಗೂ ಪ್ರಕಟಿಸಿದ 150 ಪ್ರತಿಗಳನ್ನು ಇಲಾಖೆಗೆ ಒದಗಿಸಲು ಕೋರಿ ಕಳುಹಿಸಿದೆ.

**ಪ್ರತಿಗಳು:**

1. ಮಹಾಲೇಖಪಾಲರು, ಲೆಕ್ಕಪತ್ರ ತನಿಖೆ 1 ಮತ್ತು 2 (ಎ ಮತ್ತು ಇ) ಬೆಂಗಳೂರು.
2. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು, ವಿಧಾನ ಸೌಧ, ಬೆಂಗಳೂರು.
3. ಮಾನ್ಯ ಉಪ ಮುಖ್ಯ ಮಂತ್ರಿಗಳ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಪ್ತ ಕಾರ್ಯದರ್ಶಿ, ವಿಧಾನಸೌದ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರವರ ಅಪ್ತ ಕಾರ್ಯದರ್ಶಿ, ವಿದಾನಸೌಧ, ಬೆಂಗಳೂರು.
6. ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಣ್ಣ ಉಳಿತಾಯ ಸಚಿವರ ಆಪ್ತ ಕಾರ್ಯದರ್ಶಿ.
7. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಆರ್ಥಿಕ ಇಲಾಖೆ, ಅರಣ್ಯ, ಜೀವಶಾಸ್ತ್ರ ಮತ್ತು ಪರಿಸರ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಉನ್ನತ ಶಿಕ್ಷಣ ಇಲಾಖೆ/ಯೋಜನಾ ಮತ್ತು ಸಾಂಖ್ಯಿಕ ಇಲಾಖೆ.
8. ಸಂಬಂಧಿಸಿದ ಅಧ್ಯಕ್ಷರು ಮತ್ತು ನಾಮನಿರ್ದೇಶಿತ ಹಾಗೂ ವೈಜ್ಞಾನಿಕ ಸಂಶೋಧನಾ ಸಂಸ್ಥೆಗಳ/ಇತರೆ ಸಂಸ್ಥೆಗಳನ್ನು ಪ್ರತಿನಿಧಿಸುವ ಸದಸ್ಯರುಗಳಿಗೆ (ನಿರ್ದೇಶಕರು (ತಾಂತ್ರಿಕ), ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಇವರ ಮೂಲಕ)
9. ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಕಾವೇರಿ ಭವನ, ಬೆಂಗಳೂರು.
10. ನಿರ್ದೇಶಕರು (ತಾಂತ್ರಿಕ), ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.
11. ಪತ್ರಿಕಾ ಮೇಜು / ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿಗಳು.



# ಅನುಬಂಧ

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಗೆ ನಾಮನಿರ್ದೇಶಿತಗೊಂಡು ನೇಮಿಸಲ್ಪಟ್ಟ ಅಧ್ಯಕ್ಷರು ಹಾಗೂ ಸದಸ್ಯರುಗಳ ಪಟ್ಟಿ

| | | |
|---|---|---|
| 1. | **ಪ್ರೊ. ಯು.ಆರ್. ರಾವ್** ಮಾಜಿ ಅಧ್ಯಕ್ಷರು ಇಸ್ರೋ, ಬೆಂಗಳೂರು. | : ಅಧ್ಯಕ್ಷರು |
| 2. | **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಪ್ರಧಾನ ಕಾರ್ಯದರ್ಶಿ**, ಆರ್ಥಿಕ ಇಲಾಖೆ. | : ಸರ್ಕಾರದ ಪದನಿಮಿತ್ತ ಸದಸ್ಯರು |
| 3. | **ಸರ್ಕಾರದ ಪ್ರಧಾನ ಕಾರ್ಯದರ್ಶಿ,** ಉನ್ನತ ಶಿಕ್ಷಣ ಇಲಾಖೆ. | : ಸರ್ಕಾರದ ಪದನಿಮಿತ್ತ ಸದಸ್ಯರು |
| 4. | **ಸರ್ಕಾರದ ಪ್ರಧಾನ ಕಾರ್ಯದರ್ಶಿ,** ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ. | : ಸರ್ಕಾರದ ಪದನಿಮಿತ್ತ ಸದಸ್ಯರು |
| 5. | **ಸರ್ಕಾರದ ಕಾರ್ಯದರ್ಶಿ** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ. | : ಸರ್ಕಾರದ ಪದನಿಮಿತ್ತ ಸದಸ್ಯರು |
| 6. | **ಸರ್ಕಾರದ ಕಾರ್ಯದರ್ಶಿ,** ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ. | : ಸರ್ಕಾರದ ಪದನಿಮಿತ್ತ ಸದಸ್ಯರು |
| 7. | **ಸೆಂಟ್ರಲ್ ಫುಡ್ ಟೆಕ್ನಾಲಜಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್,** ಮೈಸೂರು ಇದರ ಪ್ರತಿನಿಧಿ. | : ವೈಜ್ಞಾನಿಕ ಸಂಸ್ಥೆಗಳು/ಕೈಗಾರಿಕೆಗಳು ಇತರೆ ಸಂಸ್ಥೆಗಳನ್ನು ಪ್ರತಿನಿಧಿಸುವ ಸದಸ್ಯರು. |
| 8. | **ಡಿ.ಆರ್.ಡಿ.ಓ** ಬೆಂಗಳೂರು ಇದರ ಪ್ರತಿನಿಧಿ | : ವೈಜ್ಞಾನಿಕ ಸಂಸ್ಥೆಗಳು/ಕೈಗಾರಿಕೆಗಳು/ ಇತರೆ ಸಂಸ್ಥೆಗಳನ್ನು ಪ್ರತಿನಿಧಿಸುವ ಸದಸ್ಯರು. |
| 9. | **ಇಸ್ರೋ,** ಬೆಂಗಳೂರು ಇದರ ಪ್ರತಿನಿಧಿ | : ವೈಜ್ಞಾನಿಕ ಸಂಸ್ಥೆಗಳು/ಕೈಗಾರಿಕೆಗಳು/ ಇತರೆ ಸಂಸ್ಥೆಗಳನ್ನು ಪ್ರತಿನಿಧಿಸುವ ಸದಸ್ಯರು. |
| 10. | **ಜವಹರಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್‌ಡ್ ಸೈಂಟಿಫಿಕ್ ರೀಸರ್ಚ್** ಬೆಂಗಳೂರು–ಇದರ ಪ್ರತಿನಿಧಿ | : ವೈಜ್ಞಾನಿಕ ಸಂಸ್ಥೆಗಳು ಕೈಗಾರಿಕೆಗಳು/ಇತರೆ ಸಂಸ್ಥೆಗಳನ್ನು ಪ್ರತಿನಿಧಿಸುವ ಸದಸ್ಯರು. |
| 11. | **ಡಾ: ಬಿಸಲಯ್ಯ** ವಿಶ್ರಾಂತ ಕುಲಪತಿಗಳು, ಬೆಂಗಳೂರು. | : ನಾಮನಿರ್ದೇಶಿತ ಸದಸ್ಯರು |

12. **ಪ್ರೋ. ಎಂ. ಆರ್. ಗಜೇಂದ್ರಗಡ** : ನಾಮನಿರ್ದೇಶಿತ ಸದಸ್ಯರು
ವಿಶ್ರಾಂತ ಕುಲಪತಿಗಳು ಹಾಗೂ
ನಿವೃತ್ತ ರಸಾಯನ ಶಾಸ್ತ್ರ ಪ್ರಾಧ್ಯಾಪಕರು, ದಾವಣಗೆರೆ.

13. **ಪ್ರೊ. ಉಚ್ಚಿಲ್** : ನಾಮನಿರ್ದೇಶಿತ ಸದಸ್ಯರು
ನಿವೃತ್ತ ಭೌತಶಾಸ್ತ್ರ ಪ್ರಾಧ್ಯಾಪಕರು
ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.

14. **ಡಾ: ಪಿ.ಎಸ್. ಶಂಕರ್** : ನಾಮನಿರ್ದೇಶಿತ ಸದಸ್ಯರು
ಮೆಡಿಸಿನ್ ಪ್ರಾಧ್ಯಾಪಕರು,
ಎಂ. ಆರ್. ಎಂ. ಕಾಲೇಜು, ಗುಲ್ಬರ್ಗ.

15. **ಪ್ರೊ ಎಡ್ವರ್ಡ್ ಗುರುರಾಜ,** : ನಾಮನಿರ್ದೇಶಿತ ಸದಸ್ಯರು
ನಿವೃತ್ತ ಪ್ರಾಣಿಶಾಸ್ತ್ರ ಪ್ರಾಧ್ಯಾಪಕರು,
ಮೈಸೂರು ವಿಶ್ವವಿದ್ಯಾಲಯ, ಮೈಸೂರು.

16. **ಪ್ರೊ. ರಾಮಲಿಂಗಯ್ಯ** : ನಾಮನಿರ್ದೇಶಿತ ಸದಸ್ಯರು
ನಿವೃತ್ತ ಪರಿಸರ ವಿಜ್ಞಾನ ಪ್ರಾಧ್ಯಾಪಕರು,
ಮಂಡ್ಯ.

17. **ಪ್ರೊ ಮುನಿಯಪ್ಪ** : ನಾಮನಿರ್ದೇಶಿತ ಸದಸ್ಯರು
ಜೀವರಸಾಯನ ಶಾಸ್ತ್ರ,
ಪ್ರಾಧ್ಯಾಪಕರು (ಐಐಎಸ್ಸಿ), ಬೆಂಗಳೂರು.

18. **ಪ್ರೊ. ಎಸ್. ವಿ. ಸಂಕನೂರ** : ನಾಮನಿರ್ದೇಶಿತ ಸದಸ್ಯರು
ಪ್ರಾಂಶುಪಾಲರು ಹಾಗೂ ಭೌತಶಾಸ್ತ್ರ
ಪ್ರಾಧ್ಯಾಪಕರು, ಮುನ್ಸಿಪಲ್ ಸಂಯುಕ್ತ
ಪದವಿಪೂರ್ವ ಕಾಲೇಜು, ಗದಗ.

19. **ಡಾ: ಶ್ರೀನಾಥ್ ಶಾಸ್ತ್ರಿ** : ನಾಮನಿರ್ದೇಶಿತ ಸದಸ್ಯರು
ಪ್ರಧಾನ ಕಾರ್ಯದರ್ಶಿ
ಕನ್ನಡ ಗಣಕ ಪರಿಷತ್, ಬೆಂಗಳೂರು.

20. **ಶ್ರೀಮತಿ ಸುಧಾಮೂರ್ತಿ** : ನಾಮನಿರ್ದೇಶಿತ ಸದಸ್ಯರು
ಅಧ್ಯಕ್ಷರು, ಇನ್‌ಫೋಸಿಸ್ ಫೌಂಡೇಶನ್,
ಬೆಂಗಳೂರು.

21. **ನಿರ್ದೇಶಕರು (ತಾಂತ್ರಿಕ)** : ಸದಸ್ಯ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ,
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

**ಸಹಿ/–**
**(ಬಿ. ಶಿವರುದ್ರಸ್ವಾಮಿ),**
ಪೀಠಾಧಿಕಾರಿ,
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ,
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.



## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ನಾಮನಿರ್ದೇಶನದ ಆದೇಶಕ್ಕೆ ಮತ್ತೋರ್ವ ಸದಸ್ಯರನ್ನು ಸೇರ್ಪಡೆ ಮಾಡಿ ನೇಮಿಸುವ ಬಗ್ಗೆ

**ಉಲ್ಲೇಖ** : 1) ಸರ್ಕಾರದ ಆದೇಶ ಸಂಖ್ಯೆ : ವಿಯಇ 70 ವಿತ್ರಮ 2004, ದಿನಾಂಕ : 30/07/2005 ಹಾಗೂ 03/8/2005

2) ಅಧ್ಯಕ್ಷರು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿರವರ ಪತ್ರ ಸಂ.ವಿತಂಅ/02/2005. ದಿ.ಇಲ್ಲ, ಸೆಪ್ಟೆಂಬರ್ 2005.

ಪ್ರಸ್ತಾವನೆ :

ಮೇಲಿನ ಉಲ್ಲೇಖ (1)ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಗೆ ಅಧ್ಯಕ್ಷರನ್ನು ಮತ್ತು ಸದಸ್ಯರನ್ನು ಅಂದರೆ, ಒಟ್ಟಾರೆ 21 ಸದಸ್ಯರನ್ನು ನಾಮನಿರ್ದೇಶಿಸಿ ದಿ.3.8.2005 ರಂದು ಆದೇಶ ಹೊರಡಿಸಲಾಗಿದೆ.

ಮೇಲಿನ ಉಲ್ಲೇಖ(2)ರ ಪತ್ರದಲ್ಲಿ ಅಧ್ಯಕ್ಷರು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿರವರು ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಇವರನ್ನು ಸಹ ಸದಸ್ಯರನ್ನಾಗಿಸಿಕೊಳ್ಳುವುದು ಸೂಕ್ತವೆಂದು ಅಭಿಪ್ರಾಯಿಸಿ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ : ವಿಯಇ 70 ವಿತ್ರಮ 2004,**
**ಬೆಂಗಳೂರು, ದಿನಾಂಕ : 29–11–2005**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಸರ್ಕಾರವು ಕೂಲಂಕುಷವಾಗಿ ಈ ವಿಷಯವನ್ನು ಪರಿಶೀಲಿಸಿ, ಸರ್ಕಾರದ ಆದೇಶ ಸಂಖ್ಯೆ: ವಿಯಇ 70 ವಿತ್ರಮ 2004, ದಿನಾಂಕ : 30–7–2005 ಹಾಗೂ 03–08–2005ರ ಆದೇಶದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಗೆ ಒಟ್ಟು 21 ಸದಸ್ಯರನ್ನು ನಾಮನಿರ್ದೇಶನ ಮಾಡಲಾಗಿತ್ತು. ಈಗ ಮತ್ತೋರ್ವ ಅಂದರೆ ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಇವರನ್ನು ಸಹ ಸದಸ್ಯರನ್ನಾಗಿ ಸೇರ್ಪಡೆ ಮಾಡಿ ನೇಮಿಸಲಾಗಿದೆ. ಅಂದರೆ ಒಟ್ಟು 21 ಸದಸ್ಯರ ಬದಲಿಗೆ 22 ನಾಮನಿರ್ದೇಶಿತ ಸದಸ್ಯರುಗಳನ್ನೊಳಗೊಂಡಂತೆ ಅಕಾಡೆಮಿಯನ್ನು ಪುನರ್ ರಚಿಸಲಾಗಿದೆ. ಹಾಗೂ

ಸರ್ಕಾರದ ಪದ–ನಿಮಿತ್ತ ಸದಸ್ಯರುಗಳು ಅಂದರೆ ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳ ಸಂಖ್ಯೆ 5ರ ಬದಲು 6 ಆಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**ಸಹಿ/–**

**(ಎಸ್.ವಿ. ಸತ್ಯನಾರಾಯಣ ಮೂರ್ತಿ)**
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ಗೆ.

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಣೆಗಾಗಿ ಹಾಗೂ ಪ್ರಕಟಿಸಿದ 150 ಪ್ರತಿಗಳನ್ನು ಇಲಾಖೆಗೆ ಒದಗಿಸಲು ಕೋರಿ ಕಳುಹಿಸಿದೆ.

ಪ್ರತಿಗಳು

1) ಮಹಾಲೇಖಪಾಲರು, ಲೆಕ್ಕಪತ್ರ ತನಿಖೆ 1 ಮತ್ತು 2 (ಎ ಮತ್ತು ಇ) ಬೆಂಗಳೂರು
2) ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು
3) ಮಾನ್ಯ ಉಪಮುಖ್ಯಮಂತ್ರಿಗಳ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
4) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
6) ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಣ್ಣ ಉಳಿತಾಯ ಮಂತ್ರಿಯವರ ಆಪ್ತ ಕಾರ್ಯದರ್ಶಿ
7) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಆರ್ಥಿಕ ಇಲಾಖೆ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಉನ್ನತ ಶಿಕ್ಷಣ ಇಲಾಖೆ/ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ಮತ್ತು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ/ ಯೋಜನಾ ಮತ್ತು ಸಾಂಖ್ಯಿಕ ಇಲಾಖೆ.
8) ನಿರ್ದೇಶಕರು, (ತಾಂತ್ರಿಕ), ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.
9) ನಿಯಂತ್ರಣಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಕಾವೇರಿ ಭವನ, ಬೆಂಗಳೂರು
10) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 7–8) ವಿಧಾನ ಸೌಧ, ಬೆಂಗಳೂರು
11) ರಕ್ಷಾ ಕಡತ / ಹೆಚ್ಚಿನ ಪ್ರತಿಗಳು



## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಪುನರ್ ರಚನೆ ಹಾಗೂ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ನೇಮಿಸುವ ಬಗ್ಗೆ.

**ಓದಲಾಗಿದೆ:–**

1. ಸರ್ಕಾರಿ ಆದೇಶ ಸಂಖ್ಯೆ : ವಿಯಇ 70 ವಿತ್ರಮ 2005, ದಿನಾಂಕ : 30–07–2005.
2. ಸರ್ಕಾರಿ ಆದೇಶ ಸಂಖ್ಯೆ : ವಿಯಇ 70 ವಿತ್ರಮ 2005, ದಿನಾಂಕ : 03–08–2005. ಮತ್ತು 29–11–2005

3) ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಸದಸ್ಯ–ಕಾರ್ಯದರ್ಶಿರವರ ಪತ್ರ ದಿನಾಂಕ : 21–06–2008.

**ಪ್ರಸ್ತಾವನೆ**

ಮೇಲೆ ಓದಲಾದ (1) ರಲ್ಲಿನ ಆದೇಶದಲ್ಲಿ ಕರ್ನಾಟಕ ರಾಜ್ಯದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯೊಂದನ್ನು ರಚಿಸಲಾಗಿದೆ.

ಮೇಲೆ ಓದಲಾದ (2) ರಲ್ಲಿನ ಆದೇಶಗಳಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಗೆ ಅಧ್ಯಕ್ಷರನ್ನು ಮತ್ತು ಸದಸ್ಯರುಗಳನ್ನು ನಾಮನಿರ್ದೇಶಿಸಿ 3 ವರ್ಷಗಳ ಅವಧಿಗಾಗಿ ಅಥವಾ ಮುಂದಿನ ಆದೇಶದವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ನೇಮಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ (3) ರಲ್ಲಿನ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಸದಸ್ಯ–ಕಾರ್ಯದರ್ಶಿರವರ ಪತ್ರದಲ್ಲಿ ಸರ್ಕಾರವು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯನ್ನು ರಚಿಸಿ, 11 ನಾಮನಿರ್ದೇಶಿತ ಸದಸ್ಯರುಗಳನ್ನೊಳಗೊಂಡಂತೆ ಒಟ್ಟು 22 ಸದಸ್ಯರನ್ನು 3ನೇ ಆಗಸ್ಟ್ 2005 ರಿಂದ ಜಾರಿಗೆ ಬರುವಂತೆ ನಾಮ ನಿರ್ದೇಶಿಸಿ ಮುಂದಿನ 3 ವರ್ಷಗಳ ಅವಧಿಯವರೆಗೆ ನೇಮಿಸಲಾಗಿತ್ತು. ಸದರಿ ಆದೇಶದ ಪ್ರಕಾರ ಅಕಾಡೆಮಿಯ ಸದಸ್ಯರ ಅವಧಿಯು 3 ವರ್ಷಗಳು ಪೂರ್ಣಗೊಂಡಿರುವುದರಿಂದ, ಅಕಾಡೆಮಿಯ ಸದಸ್ಯರುಗಳ ಅವಧಿಯನ್ನು ವಿಸ್ತರಿಸುವಂತೆ ಅಥವಾ ಪುನರಚಿಸುವಂತೆ ಕೋರಿರುತ್ತಾರೆ.

ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ ಅಕಾಡೆಮಿಗೆ ಅಧ್ಯಕ್ಷರು ಮತ್ತು ಸದಸ್ಯರುಗಳನ್ನೊಳಂಡಂತೆ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯನ್ನು ಪುನರ್ ರಚಿಸುವ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ : ವಿಯಇ 56 ವಿತ್ರಮ 2008 ಬೆಂಗಳೂರು,**
**ದಿನಾಂಕ 04–11–2008.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯನ್ನು ಪುನರ್ ರಚಿಸಿ, ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನಮೂದಿಸಿದವರನ್ನು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಗೆ ಅವರ ಹೆಸರಿನ ಮುಂದೆ ತೋರಿಸಿದಂತೆ ಅಧ್ಯಕ್ಷರು/ಸದಸ್ಯರುಗಳನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಪುರನ್ ನಾಮನಿರ್ದೇಶಿಸಿ ಮುಂದಿನ 3 ವರ್ಷಗಳ ಅವಧಿಗಾಗಿ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ನೇಮಿಸಿ ಆದೇಶಿಸಲಾಗಿದೆ.

1. ಸದರಿ ಅಕಾಡೆಮಿಯ ರಚನೆ, ಕರ್ತವ್ಯಗಳು ಮತ್ತು ಅಧಿಕಾರಗಳು ಮೇಲೆ ಓದಲಾದ (1) ರಲ್ಲಿನ ಆದೇಶದಂತೆ ಇರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಸಹಿ/–
**(ಕೆ. ಬೋರಲಿಂಗಯ್ಯ)**
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ,
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ಗೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಣೆಗಾಗಿ ಹಾಗೂ ಪ್ರಕಟಿಸಿದ 150 ಪ್ರತಿಗಳನ್ನು ಇಲಾಖೆಗೆ ಒದಗಿಸಲು ಕೋರಿ ಕಳುಹಿಸಿದೆ.



**ಪ್ರತಿಗಳು :**

1) ಮಹಾಲೇಖಪಾಲರು, ಲೆಕ್ಕಪತ್ರ ತನಿಖೆ 1 ಮತ್ತು 2 (ಎ ಮತ್ತು ಇ) ಬೆಂಗಳೂರು.
2) ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು
3) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
5) ಅನುಬಂಧದಲ್ಲಿರುವ ಸಂಬಂಧಿಸಿದ ಅಧ್ಯಕ್ಷರು/ನಾಮನಿರ್ದೇಶಿತ ಸದಸ್ಯರುಗಳಿಗೆ ಅಕಾಡೆಮಿ ಮುಖಾಂತರ.
6) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ/ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ/ಯೋಜನಾ ಮತ್ತು ಸಾಂಖ್ಯಿಕ ಇಲಾಖೆ.
7) ನಿರ್ದೇಶಕರು (ತಾಂತ್ರಿಕ) ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.
8) ಮಾನ್ಯ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು
9) ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಕಾವೇರಿ ಭವನ, ಬೆಂಗಳೂರು
10) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್–7–8), ವಿಧಾನ ಸೌಧ, ಬೆಂಗಳೂರು
11) ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು
12) ರಕ್ಷಾ ಕಡತ / ಹೆಚ್ಚಿನ ಪ್ರತಿಗಳು.

# ಅನುಬಂಧ

**ಸರ್ಕಾರಿ ಆದೇಶ ಸಂಖ್ಯೆ : ವಿಯಇ 56 ವಿತ್ರಮ 2008 ದಿನಾಂಕ : 04–11–2008**

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಗೆ ನಾಮನಿರ್ದೇಶಿತಗೊಂಡು ಪುನರ್ ನೇಮಿಸಲ್ಪಟ್ಟ ಅಧ್ಯಕ್ಷರು ಹಾಗೂ ಸದಸ್ಯರುಗಳ ಪಟ್ಟಿ

1. **ಪ್ರೊ. ಯು.ಆರ್. ರಾವ್** : ಅಧ್ಯಕ್ಷರು
   ಮಾಜಿ ಅಧ್ಯಕ್ಷರು ಇಸ್ರೋ, ಬೆಂಗಳೂರು.

2. **ಸರ್ಕಾರದ ಪ್ರಧಾನ ಕಾರ್ಯದರ್ಶಿ,** : ಸದಸ್ಯರು
   ಆರ್ಥಿಕ ಇಲಾಖೆ.

3. **ಸರ್ಕಾರದ ಪ್ರಧಾನ ಕಾರ್ಯದರ್ಶಿ** : ಸದಸ್ಯರು
   ಉನ್ನತ ಶಿಕ್ಷಣ ಇಲಾಖೆ

4. **ಸರ್ಕಾರದ ಪ್ರಧಾನ ಕಾರ್ಯದರ್ಶಿ,** : ಸದಸ್ಯರು
   ಅರಣ್ಯ ಜೀವಿಶಾಸ್ತ್ರ ಮತ್ತು
   ಪರಿಸರ ಇಲಾಖೆ.

5. **ಸರ್ಕಾರದ ಪ್ರಧಾನ ಕಾರ್ಯದರ್ಶಿ** : ಸದಸ್ಯರು
   ಗ್ರಾಮೀಣಾಭಿವೃದ್ಧಿ ಮತ್ತು
   ಪಂಚಾಯತ್‌ರಾಜ್ ಇಲಾಖೆ.

6. **ಸರ್ಕಾರದ ಕಾರ್ಯದರ್ಶಿ,** : ಸದಸ್ಯರು
   ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ
   ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

7. **ಡಾ|| ವಿ. ಪ್ರಕಾಶ್**
   ಸೆಂಟ್ರಲ್ ಫುಡ್ ಟೆಕ್ನಾಲಜಿಕಲ್ ರಿಸರ್ಚ್ : ಸದಸ್ಯರು
   ಇನ್‌ಸ್ಟಿಟ್ಯೂಟ್, ಮೈಸೂರು ಅಥವಾ
   ಇದರ ಪ್ರತಿನಿಧಿ.

8. **ಡಾ|| ಕೆ. ಎನ್. ಶಂಕರ** : ಸದಸ್ಯರು
   ನಿವೃತ್ತ ನಿರ್ದೇಶಕರು, ಇಸ್ರೋ, ಬೆಂಗಳೂರು



9. **ಡಾ: ಬಿಸಲಯ್ಯ** : ಸದಸ್ಯರು
   ವಿಶ್ರಾಂತ ಕುಲಪತಿಗಳು,
   ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯ
   ಬೆಂಗಳೂರು, ನಂ. 629, 7ನೇ ಮೇನ್,
   3ನೇ ಕ್ರಾಸ್, ಹೆಚ್.ಎಂ.ಟಿ. ಲೇಔಟ್,
   ಗಂಗಾನಗರ, ಬೆಂಗಳೂರು – 32.

10. **ಪ್ರೋ. ಎಂ. ಆರ್. ಗಜೇಂದ್ರಗಡ** : ಸದಸ್ಯರು
    ವಿಶ್ರಾಂತ ಕುಲಪತಿಗಳು, ಕುವೆಂಪು ವಿಶ್ವವಿದ್ಯಾನಿಲಯ
    ನಿಸರ್ಗ ಲೇಔಟ್, ಜಿಗಣಿ, ಬೆಂಗಳೂರು – 562 106.

11. **ಪ್ರೊ. ಜಯಗೋಪಾಲ್ ಉಚ್ಚಿಲ್** : ಸದಸ್ಯರು
    ನಿವೃತ್ತ ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು
    ವಸ್ತು ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ,
    ಬಿ–1579, ಆಕಾಂಕ್ಷೆ, ಸಹಕಾರನಗರ, ಬೆಂಗಳೂರು–92

12. **ಡಾ: ಪಿ.ಎಸ್. ಶಂಕರ್** : ಸದಸ್ಯರು
    ಪ್ರೊಫೆಸರ್ ಆಫ್ ಮೆಡಿಸಿನ್ ಮತ್ತು ನಿರ್ದೇಶಕರು,
    ಎಂ. ಆರ್. ಮೆಡಿಕಲ್ ಕಾಲೇಜು,
    ದೀಪ್ತಿ ಜಿಲ್ಲಾ ಕೋರ್ಟ್ ಹಿಂಭಾಗ, ಗುಲ್ಬರ್ಗ.

13. **ಪ್ರೊ|| ದ್ವಾರಕೀನಾಥ್** : ಸದಸ್ಯರು
    ವಿಶ್ರಾಂತ ಕುಲಪತಿಗಳು ಮತ್ತು ಅಧ್ಯಕ್ಷರು
    ಕೃಷಿ ಮಾನವ ಪರಿಸರ ಪ್ರತಿಷ್ಠಾನ, ನಂ.204
    100 ಅಡಿ ರಿಂಗ್‌ರಸ್ತೆ, ಬನಶಂಕರಿ 2ನೇ ಬ್ಲಾಕ್
    3ನೇ ಹಂತ, ಬೆಂಗಳೂರು

14. **ಪ್ರೊ. ರಾಮಲಿಂಗಯ್ಯ** : ಸದಸ್ಯರು
    ನಿರ್ದೇಶಕರು, ಪಿ.ಇ.ಟಿ. ವಿದ್ಯಾ ಸಂಸ್ಥೆ, ಶನಿಕೃಪಾ,
    ಕೆ.ಟಿ. 501, 6ನೇ ಕ್ರಾಸ್, ಚಾಮುಂಡೇಶ್ವರಿ ನಗರ,
    ಮಂಡ್ಯ – 571 401

15. **ಪ್ರೊ|| ಕೆ. ಮುನಿಯಪ್ಪ** : ಸದಸ್ಯರು
    ಅಧ್ಯಕ್ಷರು, ಜೀವರಸಾಯನ ಶಾಸ್ತ್ರ ವಿಭಾಗ,
    ಭಾರತೀಯ ವಿಜ್ಞಾನ ಮಂದಿರ (ಐಐಎಸ್ಸಿ), ಬೆಂಗಳೂರು.

16. **ಪ್ರೊ. ಎಸ್. ವಿ. ಸಂಕನೂರ** : ಸದಸ್ಯರು
ಪ್ರಾಧ್ಯಾಪಕರು, ನಗರಸಭೆ ಸಂಯುಕ್ತ
ಪದವಿಪೂರ್ವ ಕಾಲೇಜು, ವಕೀಲ್ ಚಾಳ್, ಗದಗ.

17. **ಡಾ: ಶ್ರೀನಾಥ್ ಶಾಸ್ತ್ರಿ** : ಸದಸ್ಯರು
ಪ್ರಧಾನ ಕಾರ್ಯದರ್ಶಿ, ಕನ್ನಡ ಗಣಕ ಪರಿಷತ್,
ಬೆಂಗಳೂರು. ನಂ. 123/1, ಮೊದಲನೆಯ ಮಹಡಿ
ಶಿವಗೃಹ ಅಪಾರ್ಟ್‌ಮೆಂಟ್ಸ್, ನೇತಾಜಿ ರೋಡ್
4ನೇ ಬ್ಲಾಕ್, ತ್ಯಾಗರಾಜನಗರ, ಬೆಂಗಳೂರು – 560028.

18. **ನಿರ್ದೇಶಕರು (ತಾಂತ್ರಿಕ)** : ಸದಸ್ಯ – ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ,
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

**ಸಹಿ/–**
**(ಕೆ. ಬೋರಲಿಂಗಯ್ಯ),**
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ,
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.